


ಸ್ಮಿತಾ ಅಮೃತರಾಜ್
ಕಲೆ: ಸಂತೋಷ್ ಸಸಿಹಿತ್ಲು

# ಒಂದು ಮಳೆಯೊಳಗೆ



'ನಿನ್ನೆ ತೋಟಲಿ ಕಾಯಿಗಳ ಪೂರಾ ರಾಶಿ ಹಾಕಿ ಬಂದಿದ್ದೆ, ಎಲ್ಲಾ ಬೊಳ್ಳ ಹೋತೋ ಏನೋ? ಈ ಎರಡ್ ಗಂಡ್ ಮಕ್ಕಳಿಗೆ ಹಂಞಾದರ್ ಮನೆ ಕಡೆ ಗ್ಯಾನ ಇದ್ದಿದ್ದರೆ ಹಿಂಗೆ ಆತಿತ್ತೆ...'

ಗೌಡರು ಪಿರಿಪಿರಿ ಮಾಡುತ್ತಾ ಭೋರೆಂದು ಸುರಿಯುವ ಮಳೆಗೆ ಹೊರಗೆ ಕಾಲಿಡಲೂ ಆಗದ ಅಸಹಾಯಕತೆಗೆ ಮತ್ತಷ್ಟು ಜೋರಾಗಿ ಗೊಣಗಿಕೊಳ್ಳುತ್ತಾ ಹೊರ ಜಗಲಿಯಲ್ಲಿ ಅತ್ತಿಂದಿತ್ತ ನಡೆಯುತ್ತಿದ್ದಾರೆ.

ಒಮ್ಮೆಗೆ ಭೂಮಿ ನಡುಗಿದಂತೆ ಹೊಡೆದ ಸಿಡಿಲಿಗೆ 'ರಾಮಾ... ರಾಮಾ...' ಅನ್ನುತ್ತಾ ಹೊರಗೆ ಅನ್ನ ಹಾಕಿ ಜಗಲಿಯ ತುದಿಯಲ್ಲಿ ಇಟ್ಟಿದ್ದ ಹಾರೆ ಮತ್ತು ಪಿಕಾಸಿಯನ್ನ ಅಂಗಳದ ನಡುವಿಗೆ ಬಿಸಾಕಿ, 'ಒಮ್ಮೆ ಒಳಗೆ ಹೋಗು ಕಮಲ... ಸುಟ್ಟ ಸಿಡ್ಲ್ ಎಂತ ಮಾಡಿ ಹಾಕಿದೆನೋ ಏನೋ' ಅಂತ ಸೊಸೆಯನ್ನ ಕೂಗಿ ಕರೆಯುತ್ತಾ ಚಾವಡಿ ಮೂಲೆಯ ಇಸೀಚೇರಿನಲ್ಲಿ ಕುಳಿತುಕೊಂಡರು.

ಅವಳೋ ಆ ಜಡಿಗುಟ್ಟ ಮಳೆಯಲ್ಲೂ ಬಟ್ಟೆ ಒಗೆಯುವ ಕಲ್ಲಿನ ಮುಂದೆ ಕುಕ್ಕರಗಾಲಲ್ಲಿ ಕೂತು ಸತತವಾಗಿ ನಾಲ್ಕು ದಿನದಿಂದೀಚೆ ಬಟ್ಟೆ ತೊಳೆಯುತ್ತಲೇ ಇದ್ದಾಳೆ. ಬಟ್ಟೆಗಂಟಿದ ರಣಕೆಸರು ತೊಳೆದು ತೊಳೆದು ಸಾಕಾಗಿ, ಬಕೇಟಿನಲ್ಲಿ ತುಂಬಿಟ್ಟ ಮಳೆನೀರೂ ಸಾಲದೆ, ಡ್ರಮ್‌ನಿಂದ ಬಕೇಟಿನಲ್ಲಿ ಗೋರಿಂಚಿ ಗೋರಿಂಚಿ ತೆಗೆದು ಚಾಳಿಸುತ್ತಿದ್ದಾಳೆ. ರಟ್ಟೆ ಸೋಲುತ್ತದೋ, ಬಟ್ಟೆ ತೊಳೆದು ಮುಗಿಯುತ್ತದೋ, ಹಾಳು ಮಳೆ ನಿಲ್ಲುತ್ತದೋ... ಎಂಬಂತೆ ಎಲ್ಲವೂ ಒಂದಕ್ಕೊಂದು ಪೈಪೋಟಿಗೆ ಬಿದ್ದಂತೆ ಸಾಗುತ್ತಿವೆ. ಇದೇನಪ್ಪಾ... ಈ ಮಳೆಗಾಲ ಕಮಲಕ್ಕ ಈ